ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಸಂ: ಗಯವಿ/ಕೆ-ಕಿಸಾನ್/Farmers Database/2014-15

ಕೇಂದ್ರ ಕಚೇರಿ, ಶೇಷಾದ್ರಿ ರಸ್ತೆ
ಬೆಂಗಳೂರು - 560 001
ದಿನಾಂಕ: 25-07-2014

ಗೆ,

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
ಬೆಳಗಾವಿ, ಬೀದರ್, ಬಿಜಾಪುರ, ಚಾಮರಾಜನಗರ,
ಚಿತ್ರದುರ್ಗ, ದ.ಕನ್ನಡ, ಮಂಡ್ಯ, ದಾವಣಗೆರೆ, ಧಾರವಾಡ,
ಹಾಸನ, ಹಾವೇರಿ, ಕೊಡಗು, ಮೈಸೂರು,
ರಾಮನಗರ, ಉಡುಪಿ, ತುಮಕೂರು ಮತ್ತು ಯಾದಗಿರ್

ವಿಷಯ: ಕೆ-ಕಿಸಾನ್ ಯೋಜನೆಗೆ ಸಂಬಂಧಿಸಿದಂತೆ ಕಸಬಾ ಹೋಬಳಿಗಳಲ್ಲಿರುವ ರೈತರ ದತ್ತಾಂಶವನ್ನು ಸೃಜಿಸುವ ಕುರಿತು.

ಉಲ್ಲೇಖ: 3. ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ - 28-04-2014

4. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ- 18-06-2014 ಮತ್ತು ಇ-ಮೇಲ್ ದಿನಾಂಕ 22-07-2014

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸುತ್ತೋಲೆ ಮತ್ತು ಪತ್ರದ ಅನ್ವಯ ಎಲ್ಲಾ ಕಸಬಾ ರೈತ ಸಂಪರ್ಕ ಕೇಂದ್ರಗಳ ವ್ಯಾಪ್ತಿಗೆ ಒಳಪಡುವ ರೈತರ ದತ್ತಾಂಶವನ್ನು ರೈತ ಅನುವುಗಾರರ ಮುಖಾಂತರ ದಿನಾಂಕ 15-07-2014 ರೊಳಗೆ ಪೂರ್ಣಗೊಳಿಸಲು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಕ್ರಮವಹಿಸಲು ಸೂಚಿಸಲಾಗಿತ್ತು, ಆದರೆ, ದಿನಾಂಕ 25-07-2014 ರಂದು ಖುದ್ದಾಗಿ ತಮ್ಮ ಜಿಲ್ಲೆಗಳ ಪ್ರಗತಿ ಪರಿಶೀಲಿಸಲಾಗಿದ್ದು, ಶೇ. 50 ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿರುವುದು ವಿಷಾದನಿಯ.

ಈ ಹಿನ್ನೆಲೆಯಲ್ಲಿ, ತಮ್ಮ ಜಿಲ್ಲೆಗಳ ಕಸಬಾ ರೈತ ಸಂಪರ್ಕ ಕೇಂದ್ರ ದತ್ತಾಂಶ ಸಂಗ್ರಹಣೆಯನ್ನು ದಿನಾಂಕ 15-08-2014 ರೊಳಗೆ ಪೂರ್ಣಗೊಳಿಸಲು ಅಂತಿಮ ಗಡುವು ನೀಡಲಾಗಿದ್ದು, ಈ ದಿನಾಂಕದೊಳಗೆ ಮಾಹಿತಿ ಸಂಗ್ರಹಿಸಿ ಹಾಗೂ Data Entry Operator ಗಳ ಮೂಲಕ AISS software ನಲ್ಲಿ upload ಮಾಡಿಸಲು ಕ್ರಮವಹಿಸಲು ಸೂಚಿಸಿದೆ.

ಮುಂದುವರೆದು, ಕಸಬಾ ರೈತ ಸಂಪರ್ಕ ಕೇಂದ್ರಗಳ ಮಾಹಿತಿ ಸಂಗ್ರಹಣೆ ಪೂರ್ಣಗೊಳಿಸಿ ತಾಲ್ಲೂಕಿನ ಇತರೆ ಹೋಬಳಿಗಳ ರೈತ ಸಂಪರ್ಕ ಕೇಂದ್ರಗಳ ವ್ಯಾಪ್ತಿಯಲ್ಲಿಯೂ ಅತೀ ಶೀಘ್ರದಲ್ಲಿಯೇ ಮಾಹಿತಿ ಸಂಗ್ರಹಣೆ ಕೈಗೊಳ್ಳಬೇಕಾಗಿರುವುದರಿಂದ, ಅತೀ ತುರ್ತಾಗಿ ಪೂರ್ಣಗೊಳಿಸಲು ಕ್ರಮವಹಿಸುವಂತೆ ಸೂಚಿಸಿದೆ.

26.7.14

ಕೃಷಿ ಆಯುಕ್ತರು

ಪ್ರತಿಯನ್ನು

- ಕೇಂದ್ರ ಕಛೇರಿಯ ಸಂಬಂಧಪಟ್ಟ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.